

ತಾಯಿ–ಮಗುವಿನ ಜೊತೆ ಕಾಂಗರೂ ಆರೈಕೆಯಲ್ಲಿ ತೊಡಗಿದ್ದ ಡಾ. ಸಹನಾ ದೇವದಾಸ್

# ನವಜಾತ ಶಿಶುಗಳಿಗೆ ಕಾಂಗರೂ ಆರೈಕೆ

**ಅವಧಿಪೂರ್ವ ಜನಿಸಿದ ಮಗುವಿಗೆ ಹೆಚ್ಚಿನ ಕಾಳಜಿ ಅಗತ್ಯ. ಕಾಂಗರೂ ಆರೈಕೆ ಮೂಲಕ ಮಗುವಿನ ತೂಕ ಹೆಚ್ಚಿಸಿ ಆರೋಗ್ಯ ಕಾಪಾಡಿಕೊಳ್ಳುವ ಮೂಲಕ ಸುರಕ್ಷಿತವಾಗಿ ಬೆಳೆಸಬಹುದು.**

**■ ಉಮಾ ಅನಂತ್**

ಸುಮಾರು ನಾಲ್ಕು ವರ್ಷಗಳ ಹಿಂದಿನ ಮಾತು. ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ಹೆರಿಗೆಗಾಗಿ ಒಬ್ಬ ಗರ್ಭಿಣಿ ದಾಖಲಾಗಿದ್ದಳು. ಹೆಸರು ರಾಬಿಯಾ. ಮಡಿಲಿಗೆ ಮಗು ಪಡೆವ ಸಂಭ್ರಮ ಈ ಕುಟುಂಬಕ್ಕೆ. ಮಗುವಿನ ತೀವ್ರ ನಿರೀಕ್ಷೆಯಲ್ಲಿದ್ದಾಗ ಜನಿಸಿತು ಒಂದು ಅವಧಿಪೂರ್ವ ಮಗು. ಅದೂ ಬರೀ 700 ಗ್ರಾಂ ತೂಕದೊಂದಿಗೆ. ಅತ್ಯಂತ ಕಡಿಮೆ ತೂಕವಿರುವ ಈ ಮಗು ಉಳಿಯುತ್ತದೆಯೋ ಇಲ್ಲವೋ ಎಂಬ ಆತಂಕ ಕುಟುಂಬಕ್ಕಾದರೆ, ಮಗುವನ್ನು ಉಳಿಸಿಯೇ ತೀರಬೇಕೆಂಬ ಹಟ ವೈದ್ಯರ ತಂಡಕ್ಕೆ. ನವಜಾತ ಶಿಶುವನ್ನು 'ಕಾಂಗರೂ ಮದರ್ ಕೇರ್' ಆರೈಕೆಯಲ್ಲಿ ಜತನವಾಗಿ ಕಾಪಿಟ್ಟುಕೊಂಡ ವೈದ್ಯರ ತಂಡ, ಶಿಶುವಿನ ತೂಕವನ್ನು ಹೆಚ್ಚಿಸಲು ನೆರವಾಯಿತಲ್ಲದೆ ಆಸ್ಪತ್ರೆಯಲ್ಲೇ ಇಟ್ಟು ಬೆಳೆಸಿತು. ಮಗು ದಿನದಿಂದ ದಿನಕ್ಕೆ ಕಾಂಗರೂ ಆರೈಕೆಯಲ್ಲೇ ಬೆಳೆದು ತೂಕ ಹೆಚ್ಚಿಸಿಕೊಂಡಿದ್ದಲ್ಲದೆ ಆರೋಗ್ಯದಲ್ಲೂ ಗಣನೀಯ ಸುಧಾರಣೆ ಕಂಡುಬಂತು. ಈಗ ಮಗುವಿಗೆ ನಾಲ್ಕು ವರ್ಷ. ಎಲ್ಲ ಮಕ್ಕಳಂತೆ ರಾಬಿಯಾ ಅವರ ಮಗು ತುಂಟಾಟವಾಡುತ್ತಿದೆ.

## ಏನಿದು ಕಾಂಗರೂ ಆರೈಕೆ?

ಕಾಂಗರೂ ಮದರ್‌ಕೇರ್ ಅಥವಾ ಕಾಂಗರೂ ಆರೈಕೆ ಎಂದರೆ ಕಡಿಮೆ ಸಂಪನ್ಮೂಲ, ಪುರಾವೆ ಆಧಾರಿತ (evidence based), ಕಡಿಮೆ ಜನನ ತೂಕದ (2.5 ಕಿಲೊಗಿಂತ ಕಡಿಮೆ) ಶಿಶುಗಳಿಗೆ ತಾಯಿ ಮತ್ತಿತರ ವ್ಯಕ್ತಿಗಳು ಚರ್ಮಕ್ಕೆ ಚರ್ಮ ತಾಗುವಂತೆ ಎದೆಯ ಮೇಲೆ ಮಲಗಿಸಿಕೊಂಡು ಸುದೀರ್ಘ ಆರೈಕೆ ಮಾಡುವ ಸರಳ ವಿಧಾನ ಎಂದು ವ್ಯಾಖ್ಯಾನಿಸಬಹುದು.

ತೂಕ ಕಡಿಮೆ ಇರುವ, ಅವಧಿ ಪೂರ್ವವಾಗಿ ಜನಿಸಿದ ಮಗುವಿಗೆ 'ಕಾಂಗರೂ ಕೇರ್' ವರದಾನ. ಅವಧಿಪೂರ್ವವಾಗಿ ಮಗು ಜನಿಸಿದರೆ ಶಿಶುವಿನ ಆರೋಗ್ಯವನ್ನು ಹೆಚ್ಚಿನ ಕಾಳಜಿಯಿಂದ ಕಾಪಾಡಿಕೊಳ್ಳಬೇಕಾಗುತ್ತದೆ. ಕಾಂಗರೂ ತಾಯಿಯ ಆರೈಕೆ ಅತ್ಯಂತ ಕಡಿಮೆ ತೂಕದ, ಪ್ರಸವಪೂರ್ವವಾಗಿ